ದ್ದೀರಿ. ಅನಂರಿಂದ ವಿವರಣೆ ಬಂದಿಲ್ಲ ತಮಗೆ ವರದಿ ಬಾರದೆ ಇರುವ ಕಾರಣ, ಅವರನ್ನು ಬಂದಿಸಿಲ್ಲ ಎನ್ನುವ ವಿಚಾರ ತಿಳುವಳಿಕೆಗೆ ಬರುತ್ತದೆ ಪತ್ರಿಕೆಗಳಲ್ಲಿ ಬಂದಿರತಕ್ಕಂಥ ಒಂದು ಹೇಳಿಕೆಯ ಮೇಲೆ ಅದು ಸರಿಯಾಗಿದೆ ಎಂಹು ಒಂದು ನಿರ್ಧಾರಕ್ಕೆ ಬರುವುದಕ್ಕೂ ಸಾಧ್ಯವಾಗುವುದಿಲ್ಲ. ಆದುದರಿಂದ ಈಗ ವಿಷಯ ಗಮನಕ್ಕೆ ತಂದಿರುತ್ತೀರಿ. ಆ ರೀತಿ ಏನಾದರೂ ಆಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ವರದಿ ಬರದೆ ನಾವು ಏನು ಮಾಡುವುದಕ್ಕಾಗುವುದಿಲ್ಲವೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

(ಗೊಂಡಲ)

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ತಮ್ಮ ಕಡೆಗೆ ಬಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ.

ಉಪಾಧ್ಯಕ್ಷರು.—ಮಾನ್ಯ ಮಲ್ಲಪ್ಪನವರೇ ತಮಗೆ ಅನಂತರ ಅವಕಾಶ ಕೊಡುತ್ತೇನೆ. ತಮ್ಮ ಗಮನ ಸೆಳೆಯುವ ಸೂಚನೆ ಬಂದಿರುತ್ತದೆ. ಉತ್ತರ ಮಾನ್ಯ ಸಚಿವರು ಕೊಡುತ್ತಾರೆ.

(ಗೊಂಡಲ)

Mr. DEPUTY SPEAKER:—I may be allowed to Speak. I am on my legs. Please, all of you resume your Seats. I do understand the emotion of the hon. Members with regard to the Stipendiary graduates I have already told that I will allow all the hon. Members who desire to speak on the subject matter

HON. MEMBERS.--When.

MR. DEPUTY SPEAKER --Now alone after laying down the papers on the table of the House which will not take more than a minute.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಪಿ. ಎಲ್. ಪಾಟೀಲ್. ಕಂದಾಯ ಮಂತ್ರಿಗಳು.--ಮಾನ್ಯ ಅಧ್ಯಕ್ಷರೇ ನನ್ನ ಹೆಸರಿನ ಮುಂದೆ ಇರುವಂತಹ 1957 ನೇ ಇಸವಿಯ ಕರ್ನಾಟಕ ಸ್ಟ್ಯಾಂಪು ಶಾಸನದ 9(2) ನೇ ಕಲಮಿನ ಮೇರೆಗೆ ಸರ್ಕಾರಿ ನೌಕರರಿಗೆ ಗೃಹ ನಿರ್ಮಾಣ ಮನೆ ಖರೀದಿ ಹಾಗೂ ಮನೆ ದುರಸ್ಥಿಯ ಮುಂಗಡಕ್ಕೆ ಸಂಬಂಧಿಸಿದ ಸ್ಟ್ಯಾಂಪು ಶುಲ್ಕದ ವಿನಾಯಿತಿಗೆ ಸಂಬಂಧಿಸಿದಂತೆ ಹೊರಡಿಸಿದ ದಿನಾಂಕ ಮೇ 6, 1982 ನೇ ಆರ್.ಡಿ.84 ಇ. ಎಸ್. ಟಿ. 81 ನೇ ಕ್ರಮಾಂಕದ ಆದೇಶ ಹಾಗೂ (2) ಮೈಸೂರಿನ ವಿಶ್ರಾಂತಿಧಾಮದವರಿಗೆ ಬರೆದುಕೊಡಬೇಕಾದ ಕ್ರಯಪತ್ರದ ಸ್ಟ್ಯಾಂಪು ಶುಲ್ಕದಲ್ಲಿನ ರಿಯಾಯಿತಿಗೆ ಸಂಬಂಧಿಸಿದಂತೆ ಹೊರಡಿಸಿದ ದಿನಾಂಕ ಫೆಬ್ರವರಿ 17, 1983 ನೇ ಆರ್. ಡಿ. 140 ಇ. ಎಸ್. ಆರ್. 82 ನೇ ಕ್ರಮಾಂಕದ ಆದೇಶಗಳನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ

"1939 ನೇ ಇಸವಿಯ ಕರ್ನಾಟಕ ವಾಹನಗಳ ಶಾಸನದ 133 (3) ನೇ ಕಲಮಿನ ಮೇರೆಗೇ 1983 ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ (ಮೂರನೆಯ ತಿದ್ದುಪಡಿ) ನಿಯಮಗಳ ಮೇರೆಗೆ ಹೊರಡಿಸಿದ ದಿನಾಂಕ ಫೆಬ್ರವರಿ 11, 1982 ನೇ ಎಚ್. ಡಿ. 17 ಟಿ. ಎಂ. ಆರ್ 82 ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷರು:--ಕಾಗದ ಪತ್ರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ 9 ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡನೆ ಮಾಡಲಾಗಿದೆ.

Now, we can take up the question of Stipendiary Graduates.

(Interruptions)

ಉಪಾಧ್ಯಕ್ಷರು.—ಈಗ ಸ್ಟೈಫಂಡರಿ ಗ್ರಾಜ್ಯುಯೇಟ್ಸ್ ವಿಚಾರ ತೆಗೆದುಕೊಳ್ಳಲಾಗುತ್ತದೆ.

(ಗೊಂಡಲ)

Mr. DEPUTY SPEAKER :-- If any Member speakes without my permission, it will not go into the record.

ಶ್ರೀ ಬಿ ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಪಾಲರುಗಳಿಂದ ನಿಯೋಜಿತ ದಿನಸ ಈ ಸ್ಟೈಫಂಡರಿ ಪದವೀಧರರು ಬೆಂಗಳೂರಿಗೆ ಬಂದಿದ್ದಾರೆ.

(ಗೊಂದಲ)

ಶ್ರೀ ಕೆ. ಎಸ್. ಕಾಳಮರಿಗೌಡ.—ಸ್ವಾಮಿ, ನನಗೆ ಮೊದಲು ಮಾತನಾಡಲು ಅವಕಾಶ ಕೊಡಬೇಕು.

ಉಪಾಧ್ಯಕ್ಷರು.—ಸನ್ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ನಿನ್ನೆ ದಿನಸವೇ ನೋಟೀಸ್ ಕೊಟ್ಟಿದ್ದಾರೆ

ಶ್ರೀ ಕೆ. ಎಸ್. ಕಾಳಮರಿಗೌಡ.—ನಾನು ಕೂಡ ಈ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಎಂ. ಮಹದೇವ್.—ನಾವೂ ಸಹ ಬರವಣಿಗೆಯಲ್ಲಿ ನೋಟೀಸ್ ಕೊಟ್ಟಿದ್ದೇವೆ

Mr. DEPUTY SPEAKER --I will allow everyone. But the point is that the hon'ble Member Sri B. S. Yediyurappa has given the notice yesterday. I do understand the seriousness of the matter and I will allow all the Members for about four to five minutes. Please co-operate with the Chair.

ನಿಲುವಳಿ ಸೂಚನೆ ಸ್ಟೈಫಂಡರಿ ನಿರುದ್ಯೋಗ ಪದವೀದಾರರ ಬಗ್ಗೆ

ಶ್ರೀ ಬಿ ಎಸ್ ಯಡಿಯೂರಪ್ಪ —ರಾಜ್ಯದ ಮೂಲೆಮೂಲೆಗಳಿಂದ ಬಂದಿರುವ ಸಾವಿರಾರು ಮಂದಿ ಹುಡುಗ ಹುಡುಗಿಯರು ತಮ್ಮ ಜೀವನದ ಅನಿಶ್ಚಯತೆಯ ಬಗ್ಗೆ ತುಂಬಾ ಕಳವಳಗೊಂಡಿದ್ದಾರೆ

(ಸ್ಪೀಕ್ಷಕರ ಗ್ಯಾಲರಿಯಿಂದ ಚಪ್ಪಾಳೆ)

ಉಪಾಧ್ಯಕ್ಷರು —ಇದು ಮೊದಲನೆಯ ವಾರ್ನಿಂಗ್. ಇನ್ನೊಮ್ಮೆ ಯಾರಾದರು ಚಪ್ಪಾಳೆ ತಟ್ಟಿದರೆ ಈ ಮನೆಯಿಂದ ಹೊರಗಡೆಗೆ ಕಳುಹಿಸಲಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.--ಈ ಸ್ಟೈಫಂಡರಿ ಪದವೀಧರರಿಗೆ ಎಲ್ಲ ರೀತಿಯ ಅನುಕೂಲಗಳನ್ನು ಸರ್ಕಾರದವರು ಮಾಡಿಕೊಡಬೇಕಾಗುತ್ತದೆ ಈ ಮೊದಲು ಇವರ ವಿಚಾರದಲ್ಲಿ ಕೋರ್ಟಿನಲ್ಲಿಸ್ಟೇ ಆಗಿತ್ತು. ಈಗ ಅದು ಕೂಡ ವೆಕೇಟ್ ಆಗಿದೆ. ಕಳೆದ ನಾಲ್ಕುವರೆ ವರ್ಷಗಳಿಂದ ಇವರುಗಳು ಕೇವಲ 200 ರೂಪಾಯಿಗಳ ಸಂಭಳಕ್ಕಾಗಿ ಕೂಲಿ ಕೆಲಸವನ್ನು ಜೀತದಾಳುಗಳ ರೀತಿಯಲ್ಲಿ ಮಾಡಿಕೊಂಡು ಬಂದಿದ್ದಾರೆ. ಇವರಿಗೆ ಎಲ್ಲ ಅನುಕೂಲಗಳನ್ನು ಮಾಡಿಕೊಟ್ಟಿದ್ದರೆ ಬೆಂಗಳೂರಿಗೆ ಇವರುಗಳು ಬರುವ ಅವಶ್ಯಕತೆಯೇ ಇರಲಿಲ್ಲ. ಇವರ ಕೆಲಸವನ್ನು ಖಾಯಂ ಮಾಡಿ ಗೌರವದಿಂದ ಇವರುಗಳೂ ಸಹ ಬೇರೆಯವರಂತೆ ಜೀವನ ಮಾಡಲು ಅವಕಾಶ ಮಾಡಿ ಕೊಡುವುದು ಸರ್ಕಾರದ ಕರ್ತವ್ಯವಾಗಿದೆ ಈ ಮೊದಲು ಇವರುಗಳಿಂದ ಮುಂತ್ರಿಗಳ ತುಲಾಭಾರವಾಯಿತು ಅದನ್ನು ಈಗ ಪ್ರಶ್ನಿಸುವುದಿಲ್ಲ ಈ ಹಿಂದಿನ ಸರ್ಕಾರ ಇವರ ಬಗ್ಗೆ ಏನು ಮಾಡಿದೆ ಎಂಬುದನ್ನು ಸಹ ನಾನು ಈವಾಗ ಪ್ರಶ್ನೆ ಮಾಡುವುದಿಲ್ಲ

(ಗೊಂದಲ)

ಉಪಾಧ್ಯಕ್ಷರು. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು. ಒಬ್ಬರು ಸದ್ಯಸರು ಮಾತನಾಡುತಿರುವಾಗ ಬೇರೆಯವರು ಅದಕ್ಕೆ ಅಡ್ಡಿ ಮಾಡುತ್ತಾ ಹೋದರೆ ಈ ಸಭೆಯ ಕಾಲವನ್ನು ವೇಸ್ಟ್ ಮಾಡಿದಂತೆ ಆಗುತ್ತದೆ. **There shall be no interference from other Members when a member is on his legs. There shall be no debate across the table. I will allow everyone to seek clarifications or to explain for two or three minutes**

ಶ್ರೀ ಎಂ. ಎಸ್. ಕೃಷ್ಣನ್. ನನ್ನದೊಂದು ಕ್ರಿಯಾಲೋಪವಿದೆ. ಅದೇನೆಂದರೆ, ಈಗ ಒಬ್ಬ ಮಾನ್ಯ ಸದಸ್ಯರು ಮಾತನಾಡುವಾಗ ಈ ಮೊದಲು ಮಂತ್ರಿಗಳ ತುಲಾಭಾರ ನಡೆಯಿತು ಎಂದು ಹೇಳಿದರು. ಈ ತುಲಾಭಾರ ಎಂಬ ಪದ ಪಾರ್ಲಿಮೆಂಟರಿ ಪದವೇ ಅಥವಾ ಅಲ್ಲವೇ ಎಂಬುದನ್ನು ತಾವು ಹೇಳಬೇಕಾಗಿದೆ. ಈ ಮೊದಲು ಇವರುಗಳಿಂದ ಹಿಂದಿನ ಮುಖ್ಯ ಮಂತ್ರಿಗಳು ತುಲಾಭಾರ ಮಾಡಿಸಿಕೊಂಡಿದು ಇಡೀ ಪ್ರಪಂಚಕ್ಕೇ ಗೊತ್ತಿದೆ. ಆದ್ದರಿಂದ ಇದರಲ್ಲಿ ಅನ್-ಪಾರ್ಲಿಮೆಂಟರಿ ಏನಿದೆ ? ಇದನ್ನು ಇನಶಲೆಗಳು ಏತಕ್ಕೆ ದೊಡ್ಡದು ಮಾಡಬೇಕು ?

ಉಪಾಧ್ಯಕ್ಷರು.--ಈಗ ನಾನು ಎಲ್ಲ ಸದಸ್ಯರ ಕಳಕಳಿ ಏನೆಂಬುದನ್ನು ಅರ್ಥ ಮಾಡಿಕೊಂಡಿದ್ದೇನೆ ಇಲ್ಲಿ ಮೂಲ ಪ್ರಶ್ನೆ ಇರುವುದು ಸ್ಟೈಫಂಡರಿ ಪದವೀಧರರ ಪ್ರಶ್ನೆ. ಇವರ ಬಗ್ಗೆ ಇಲ್ಲಿ ಚರ್ಚೆ ನಡೆಯುವಾಗ ಯಾವುದೇ ಪಕ್ಷ ಅಥವಾ ಪಾರ್ಟಿ ಪ್ರಶ್ನೆ ಬರುವುದಿಲ್ಲ. ಆದ್ದರಿಂದ ಎಲ್ಲ ಮಾನ್ಯ ಸದಸ್ಯರು ಇದನ್ನು